ಅಧ್ಯಕ್ಷರು :– ಯಾವ ಉದ್ದೇಶಕ್ಕಾಗಿ ಅಥವಾ ಯಾವ ವಿಚಾರಕ್ಕಾಗಿ ಸದನ ಕರೆಯಲಾಗಿದೆ ಎಂಬ ವಿಷಯವನ್ನು ಅವರು ಹೇಳಿದ್ದಾರೆ. ಕೆಲವು ಮುಖ್ಯವಾಗಿರತಕ್ಕಂಥ ಬಿಲ್‌ಗಳು ಪಾಸ್ ಆಗಬೇಗಿದೆ, ಈಗ 16ನೇ ತಾರೀಖು ಬಜೆಟ್ ಇದೆ, ಅದರ ಪೂರ್ವದಲ್ಲಿಯೇ ಇದೆಲ್ಲಾ ಆಗಬೇಕಾಗಿರುವುದರಿಂದ ಕರೆಯಬೇಕು ಎಂದು ಸರ್ಕಾರ ನನ್ನಲ್ಲಿ ವಿನಂತಿ ಮಾಡಿತ್ತು. ಕೆಲವು ಸಾರಿ ಅವಸರ ಅವಸರವಾಗಿ ಕೆಲವೊಂದು ಬಿಲ್‌ಗಳನ್ನು ಪಾಸ್ ಮಾಡಿಕೊಳ್ಳಬೇಕಾಗಿರುತ್ತದೆ, ಅದು ಅಗತ್ಯವಾಗಿರುತ್ತದೆ, ಆ ಕಾರಣದಿಂದ ನಾವು ಸದನವನ್ನು ಕರೆದಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ :– ಸಾರ್, ನಿಮ್ಮ ಗಂಭೀರ ಸ್ಥಿತಿಯನ್ನು ನಾವು ಅನುಭವಿಸಲಾರದೇ walk out ಮಾಡುತ್ತಿದ್ದೇವೆ.

ಅಧ್ಯಕ್ಷರು : ಇಲ್ಲಿ ಗಂಭೀರ ಸ್ಥಿತಿಯಿಲ್ಲ...

[ಗೊಂದಲ]

[ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜೆ.ಸಿ.ಮಾಧುಸ್ವಾಮಿಯವರು ಸಭಾತ್ಯಾಗ ಮಾಡಿದರು]

ಅಧ್ಯಕ್ಷರು :– ಲೋಕಸಭೆಯಲ್ಲಿ ಈ ರೀತಿ ಅನೇಕ ಬಾರಿಯಾಗಿದೆ. ಅವುಗಳು ಯಾವ್ಯಾವ ಸಂದರ್ಭದಲ್ಲಿ ಆಗಿದೆ ಎಂಬುದನ್ನೆಲ್ಲಾ ನಾನು ನೋಡಿದೆ. ಆದ್ದರಿಂದ ಸರ್ಕಾರ ಏನೊಂದು ಮನವಿಯನ್ನು ಮಾಡಿದೆ, ಆ ಮನವಿಯನ್ನು ಪರಿಗಣನೆ ಮಾಡಿ ನಾನು ಈ ದಿನ ಸದನವನ್ನು ನಿಯಮಾವಳಿಗಳ ಪ್ರಕಾರ ಕರೆದಿದ್ದೇನೆ. ಲೋಕಸಭೆಯಲ್ಲಿ ಈ ದಿಸೆಯಲ್ಲಿ ಏನೊಂದು ಸಂಪ್ರದಾಯಗಳನ್ನು ಹಾಕಿದ್ದಾರೋ, ಅದೆಲ್ಲವನ್ನೂ ನೋಡಿ ನಾನು ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಾನೂ ಕೂಡ ಸಭಾತ್ಯಾಗ ಮಾಡುತ್ತಿದ್ದೇನೆ.

[ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು]

ಅಧ್ಯಕ್ಷರು :– Ordinance replacements ಇತ್ಯಾದಿಗಳೆಲ್ಲಾ ಅಜೆಂಡಾದಲ್ಲಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೆ, ಒಂದು ಅಸತ್ಯವನ್ನು defend ಮಾಡುವುದಕ್ಕೆ ಇನ್ನೊಂದು ಅಸತ್ಯ ಹೇಳಬಾರದು.